# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 841 (779)
2. ಸದಸ್ಯರ ಹೆಸರು : ಶ್ರೀ.ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 20-09-2022
4. ಉತ್ತರಿಸುವವರು : ಮಾನ್ಯ ನಗರಾಭಿವೃದ್ಧಿ ಸಚಿವರು.

<table>
<tr><th>ಕ್ರ. ಸಂ.</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ)</td><td>ಗದಗ ಬೆಟಗೇರಿಗೆ 24X7 ಕುಡಿಯುವ ನೀರಿನ ಯೋಜನೆ ಸಿವಿಲ್ ಕಾಮಗಾರಿ ಮಾಡಲು ಯಾವ ಗುತ್ತಿಗೆದಾರರಿಗೆ ಮತ್ತು ಯಾವಾಗ ನೀಡಲಾಗಿದೆ; ಹಾಗೂ ಅವರಿಗೆ ಕಾಮಗಾರಿ ಪೂರ್ಣಗೊಳಿಸಲು ನೀಡಿದ ಕಾಲಾವಧಿ ಎಷ್ಟು; ಸದರಿ ಕಾಮಗಾರಿ ಪೂರ್ಣಗೊಂಡಿದೆಯೇ;</td><td>ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿ (ಎನ್.ಕೆ.ಯು.ಎಸ್.ಐ.ಪಿ) ಗದಗ-ಬೆಟಗೇರಿ ನಗರದ 24X7 ಕುಡಿಯುವ ನೀರಿನ ಯೋಜನೆ ದಿನಾಂಕ:24-12-2014 ರಂದು ಮೆ॥ ಎಸ್‌ಪಿಎಂಎಲ್ ಇನ್‌ಫ್ರಾ ಲಿ., ಗುರ್‌ಗಾವ್, ನವದೆಹಲಿ ಇವರಿಗೆ ಗುತ್ತಿಗೆ ನೀಡಲಾಗಿದೆ.<br><br>ಗುತ್ತಿಗೆ ಅವಧಿ 30 ತಿಂಗಳು ಅಂದರೆ, ದಿನಾಂಕ:23-06-2017 ಕ್ಕೆ ಪೂರ್ಣಗೊಳಿಸಬೇಕಾಗಿರುತ್ತದೆ. ಹೆಚ್ಚುವರಿ ಕಾಮಗಾರಿಯ ಪರಿಮಾಣಗಳ ಕಾರಣಗಳಿಂದ ಹಾಗೂ ಗುತ್ತಿಗೆದಾರರ ವಿಳಂಬದಿಂದ ಗುತ್ತಿಗೆ ಅವಧಿಯನ್ನು ದಿನಾಂಕ:30-09-2022 ರೊಳಗೆ ಕಾಮಗಾರಿ ಸಂಪೂರ್ಣಗೊಳಿಸಲು ಅಂತಿಮ ಗಡುವು ನೀಡಲಾಗಿದೆ. ಇದುವರೆಗೆ ಕಾಮಗಾರಿ ಶೇ.87.1 ರಷ್ಟು ಪ್ರಗತಿ ಸಾಧಿಸಿದೆ.</td></tr>
<tr><td>ಆ)</td><td>24X7 ಕುಡಿಯುವ ನೀರಿನ ಯೋಜನೆಯನ್ನು ಗುತ್ತಿಗೆದಾರರು ಪೂರ್ಣಗೊಳಿಸಿದ್ದಾರೆಯೇ; (ಮಾಹಿತಿ ನೀಡುವುದು)</td><td>ಗದಗ-ಬೆಟಗೇರಿ ನಗರದ 24X7 ಕುಡಿಯುವ ನೀರಿನ ಯೋಜನೆಯ ಭೌತಿಕ ಪ್ರಗತಿ ಶೇ.90 ರಷ್ಟು ಸಾಧಿಸಿದೆ. ಪ್ರಗತಿ ಸಾಧಿಸಿದ ವಿವರ ಕೆಳಕಂಡಂತಿದೆ:<br><table>
<tr><th>ವಿವರ</th><th>ಗುರಿ (ಪರಿಷ್ಕೃತ BOQ)</th><th>ಸಾಧನೆ</th></tr>
<tr><td>HDPE + DI ವಿತರಣ ಜಾಲದ ಪೈಪ್‌ಲೈನ</td><td>(468.98 + 7.40) 476.38 ಕಿ.ಮೀ</td><td>(464.22 + 5.61) 469.83 ಕಿ.ಮೀ</td></tr>
<tr><td>DI/HDPE ಫೀಡರ್ ಪೈಪ್‌ಲೈನ್</td><td>12.01 ಕಿ.ಮೀ</td><td>10.68 ಕಿ.ಮೀ</td></tr>
<tr><td>ಗೃಹ ನಳ ಸಂಪರ್ಕ</td><td>40578 ಸಂಖ್ಯೆ</td><td>39011 ಸಂಖ್ಯೆ</td></tr>
<tr><td>ಮೇಲ್ಮಟ್ಟದ ಜಲ ಸಂಗ್ರಹಗಾರ</td><td>05 ಸಂಖ್ಯೆ</td><td>03 ಸಂಖ್ಯೆ (2 ಸಂಖ್ಯೆ ಶೇ.90 ಪ್ರಗತಿ)</td></tr>
<tr><td>ವಾಲ್ವ ಜೋಡಣೆ</td><td>1188 ಸಂಖ್ಯೆ</td><td>549 ಸಂಖ್ಯೆ</td></tr>
</table></td></tr>
</table>

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| | | ಗದಗ–ಬೆಟಗೇರಿ ನಗರವನ್ನು ಭೌಗೋಳಿಕಕ್ಕೆ ತಕ್ಕಂತೆ 14 ವಲಯಗಳನ್ನಾಗಿ ವಿಂಗಡಿಸಲಾಗಿದೆ. 7 ವಲಯಗಳಲ್ಲಿ ಕಾಮಗಾರಿ ಪೂರ್ಣಗೊಳಿಸಿ ನೀರು ಸರಬರಾಜು ಮಾಡಲಾಗುತ್ತಿದೆ. ಉಳಿದ 7 ವಲಯಗಳಲ್ಲಿ ಕಾಮಗಾರಿಯು ಪ್ರಗತಿಯಲ್ಲಿದೆ. |
| ಇ) | ಗದಗ ಬೆಟಗೇರಿ ಜನತೆಗೆ 24X7 ಕುಡಿಯುವ ನೀರಿನ ಯೋಜನೆ ಅಡಿ ವಿವಿಧ ವಾರ್ಡುಗಳಿಗೆ ಎಷ್ಟು ದಿನಕ್ಕೊಮ್ಮೆ ನೀರನ್ನು ಸರಬರಾಜು ಮಾಡಲಾಗುತ್ತಿದೆ; (ವಿವರ ನೀಡುವುದು) | ಗದಗ ಬೆಟಗೇರಿ ಜನತೆಗೆ 24X7 ಕುಡಿಯುವ ನೀರಿನ ಯೋಜನೆ ಅಡಿ ವಿವಿಧ ವಾರ್ಡುಗಳಿಗೆ ಕುಡಿಯುವ ನೀರಿನ ಪೂರೈಕೆ ಮಾಡುತ್ತಿರುವ ವೇಳಾ ಪಟ್ಟಿ ಮಾಹಿತಿಯನ್ನು **ಅನುಬಂಧ-1 ರಲ್ಲಿ** ನೀಡಲಾಗಿರುತ್ತದೆ. |
| ಈ) | ಗದಗ ಬೆಟಗೇರಿ ನಗರದ ವಿವಿಧ ವಾರ್ಡ್‌ಗಳಿಗೆ ನೀರಿನ ಸರಬರಾಜಿನ ನಿರ್ವಹಣೆ ಸಮರ್ಪಕವಾಗಿ ನಡೆದಿಯೇ? (ಮಾಹಿತಿ ನೀಡುವುದು) | ಗದದ–ಬೆಟಗೇರಿ ಅವಳಿನಗರದ ಕುಡಿಯುವ ನೀರಿನ ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆ ಜವಾಬ್ದಾರಿಯನ್ನು ನಗರಸಭೆಯವರು ದಿನಾಂಕ:01–01–2019 ರಿಂದ ಮೇ॥ ಎಸ್.ಪಿ.ಎಮ್.ಎಲ್ ಇನ್‌ಫ್ರಾ ಲೀ ಇವರಿಗೆ ನೀಡಿರುತ್ತಾರೆ. ಗುತ್ತಿಗೆದಾರರು ಸರಿಯಾಗಿ ನಿರ್ವಹಣೆ ಮಾಡದೇ ಇರುವ ಕಾರಣ ಸಾರ್ವಜನಿಕರಿಗೆ ಉಂಟಾಗುತ್ತಿರುವ ತೊಂದರೆಗಳ ಬಗ್ಗೆ ಕೆಯುಐಡಿಎಫ್‌ಸಿ ವತಿಯಿಂದ ಪೌರಾಯುಕ್ತರು, ನಗರಸಭೆಗೆ ರವರಿಗೆ ಹಲವು ಬಾರಿ ಪತ್ರದ ಮೂಲಕ ತಿಳಿಸಲಾಗಿದೆ. ಮೇ॥ ಎಸ್‌ಪಿಎಮ್‌ಎಲ್ ರವರು ಜವಾಬ್ದಾರಿಯಿಂದ ನೀರು ಪೂರೈಕೆ ನಿರ್ವಹಣೆಯನ್ನು ಸುಸುತ್ರವಾಗಿ ನಿರ್ವಹಿಸದ ಕಾರಣ, ಹಿಂಪಡೆದು ನಗರಸಭೆ ವತಿಯಿಂದಲೇ ನೀರಿನ ಸರಬರಾಜಿನ ನಿರ್ವಹಣೆ ಮಾಡಲು ದಿನಾಂಕ:19–07–2022 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪೌರಾಯುಕ್ತರು, ನಗರಸಭೆ ಇವರಿಗೆ ಸೂಚಿಸಲಾಗಿರುತ್ತದೆ. |

ಕಡತ ಸಂಖ್ಯೆ: ನಅಇ 136 ಪಿ.ಆರ್.ಜೆ 2022

**(ಬಿ.ಎ.ಬಸವರಾಜ)**

ನಗರಾಭಿವೃದ್ಧಿ ಸಚಿವರು.

**(ಬಿ.ಎ. ಬಸವರಾಜ)**

**ನಗರಾಭಿವೃದ್ಧಿ ಸಚಿವರು**

ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ

ಅನುಬಂಧ-1 – ಪ್ರಶ್ನೆ ಸಂಖ್ಯೆ 779 (841)

| ವಲಯ ಸಂ | ವಲಯದ ಹೆಸರು | ವಾರ್ಡಗಳ ವಿವರ | ನೀರು ಸರಬರಾಜು ಮಾಡುವ ಸಮಯ |
|---|---|---|---|
| 1 | ಆನಂದನಗರ | 33, 34, 35 | 4 ರಿಂದ 5 ದಿನಗಳಿಗೊಮ್ಮೆ 5 ರಿಂದ 6 ಘಂಟೆಗಳು. |
| 2 | ಹುಡ್ಕೋ ಕಾಲೋನಿ | 34, 35 | 3 ರಿಂದ 4 ದಿನಗಳಿಗೊಮ್ಮೆ 5 ರಿಂದ 6 ಘಂಟೆಗಳು. |
| 3 | ವಿರೇಶ್ವರ ನಗರ | 33, 35 | 8 ರಿಂದ 10 ದಿನಗಳಿಗೊಮ್ಮೆ 5 ರಿಂದ 6 ಘಂಟೆಗಳು. |
| 4 | ವಿ. ಎನ್. ಪರ್ಕ್ | 26, 30, 31, 32 | 3 ರಿಂದ 4 ದಿನಗಳಿಗೊಮ್ಮೆ 5 ರಿಂದ 6 ಘಂಟೆಗಳು. |
| 5 | ತಿಳಕ ಪಾರ್ಕ್ | 16, 17, 18, 19, 20, 21, 23, 24, 25 | 8 ರಿಂದ 10 ದಿನಗಳಿಗೊಮ್ಮೆ 5 ರಿಂದ 6 ಘಂಟೆಗಳು. |
| 5.9 | ಎಸ್. ಎಮ್. ಕೃಷ್ಣಾನಗರ | 1 | 8 ರಿಂದ 10 ದಿನಗಳಿಗೊಮ್ಮೆ 18 ಘಂಟೆಗಳು. |
| 6 | ಸರ್ವೋದಯ ಕಾಲೋನಿ | 21, 22, 23, 32 | 4 ರಿಂದ 5 ದಿನಗಳಿಗೊಮ್ಮೆ 6 ರಿಂದ 8 ಘಂಟೆಗಳು. |
| 7 | ಸಿಎಮ್‌ಸಿ | 15, 16, 17 | 1 ರಿಂದ 2 ದಿನಗಳಿಗೊಮ್ಮೆ 4 ರಿಂದ 5 ಘಂಟೆಗಳು. |
| 8 | ಬಳ್ಳಾರಿ ಗೇಟ್ | 5, 6, 7, 8, 9, 10 | 8 ರಿಂದ 10 ದಿನಗಳಿಗೊಮ್ಮೆ 5 ರಿಂದ 6 ಘಂಟೆಗಳು. |
| 9 | ಕೆ ಸಿ ಪಾರ್ಕ್ | 2, 3, 4, 5 | 8 ರಿಂದ 10 ದಿನಗಳಿಗೊಮ್ಮೆ 5 ರಿಂದ 6 ಘಂಟೆಗಳು. |
| 10 | ಪಿ & ಟಿ ಕ್ವಾಟರ್ಸ್ | 11, 29 | 4 ರಿಂದ 5 ದಿನಗಳಿಗೊಮ್ಮೆ 6 ರಿಂದ 8 ಘಂಟೆಗಳು. |
| 11 | ಎ – ಕೆ. ಎಚ್. ಕಾಲೋನಿ | 29, 27 | 4 ರಿಂದ 5 ದಿನಗಳಿಗೊಮ್ಮೆ 6 ರಿಂದ 8 ಘಂಟೆಗಳು. |
| 11 | ಬಿ – ಕೆ. ಎಚ್. ಕಾಲೋನಿ | 12, 13, 14, 26, 27, 28 | 8 ರಿಂದ 10 ದಿನಗಳಿಗೊಮ್ಮೆ 5 ರಿಂದ 6 ಘಂಟೆಗಳು. |
| 12 | ಸಂಜಯ್‌ನಗರ | 27, 28, 30 | 8 ರಿಂದ 10 ದಿನಗಳಿಗೊಮ್ಮೆ 5 ರಿಂದ 6 ಘಂಟೆಗಳು. |

ಕಾರ್ಯ ವ್ಯವಸ್ಥಾಪಕರು
(ಎನ್.ಕೆ.ಯು.ಎಸ್.ಐ.ಪಿ)